ಕರ್ನಾಟಕದಲ್ಲಿ ರಸ್ತೆ ಸಾರಿಗೆ ವ್ಯವಸ್ಥೆ ಕುರಿತು

೪೫೧ (೬೨೬) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಓಡಿಸಲು ಯೋಗ್ಯವಲ್ಲದಿರುವ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಎಷ್ಟು ?

ಆ) ಆ ಬಸ್ಸುಗಳು ಓಡಾಡುತ್ತಿದ್ದ ರಸ್ತೆಗಳಿಗೆ ಪರ್ಯಾಯ ವ್ಯವಸ್ಥೆ ಏನು ?

ಇ) ಶಿವಮೊಗ್ಗ ಡಿಪೋದಲ್ಲಿ ಓಡಿಸಲು ಅರ್ಹವಲ್ಲದ ಬಸ್ಸುಗಳು ಎಷ್ಟು ಇದೆ ಹಾಗೂ ಅದಕ್ಕೆ ಬದಲಿ ವ್ಯವಸ್ಥೆ ಯಾವಾಗ ಮಾಡಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).—

ಅ) ೬೧೫.

ಆ) ಈ ವಾಹನಗಳ ಬದಲಿಗೆ ಸಕ್ರಮವಾಗಿ ಹಂತ ಹಂತವಲ್ಲಿ ಹೊಸ ವಾಹನಗಳನ್ನು ನೀಡಲಾಗಿದೆ. ನಿಗಮವು ವಿಭಾಗಗಳಲ್ಲಿ ಒಟ್ಟಾರೆ ಅನುಸೂಚಿಯ ಕಾರ್ಯಾಚರಣೆ ಆಧಾರದ ಮೇಲೆ ಹೊಂದಿರ ಬೇಕಾದ ವಾಹನಗಳನ್ನು ಒಟ್ಟಾರೆ ಅನುಸೂಚಿಗಳು ಮತ್ತು ಶೇಕಡ ೮ ರಷ್ಟು ಹೆಚ್ಚುವರಿ ವಾಹನ ಗಳನ್ನು ವಿಭಾಗಗಳಲ್ಲಿ ವಾಹನಗಳನ್ನು ರದ್ದುಗೊಳಿಸಿದ, ವಿಭಾಗದ ವಾಹನ ಬಲದಿಂದ ತೆಗೆದು ಹಾಕಿದ ತಕ್ಷಣ ಅಂತಹ ವಿಭಾಗಕ್ಕೆ ನಿಗದಿಪಡಿಸಿದ ಗುರಿಯಂತೆ ವಿಭಾಗದ ವಾಹನ ಬಲವನ್ನು ಕಾಪಾಡಿಕೊಂಡು ಬರಲು ಹೊಸ ವಾಹನಗಳನ್ನು ನೀಡಲಾಗುತ್ತಿದೆ.

ಇ) (ಐದು) ಈ ವಾಹನಗಳನ್ನು ದಿನಾಂಕ ೨೪-೩-೯೪ಳಿಕ್ಕೆ ಕೊನೆಗೊಳ್ಳುವ ನಾಯಕನ ಪಟ್ಟಿ ಜಾತ್ರೆಯ ನಂತರ ಬದಲಿಸಲಾಗುವುದು.

ಪೋಲೀಸ್ ಇಲಾಖೆಯ ವಿವಿಧ ಶ್ರೇಣಿಯ ಹುದ್ದೆಗಳ ಆಯ್ಕೆ ಮತ್ತು ಸಂಖ್ಯೆ

೪೫೨ (೮೩೨) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಪೋಲೀಸ್ ಇಲಾಖೆಯಲ್ಲಿ ಯಾವ ಯಾವ ಶ್ರೇಣಿಯ ಎಷ್ಟು ಹುದ್ದೆಗಳಿವೆ ?

ಆ) ಅವುಗಳಲ್ಲಿ ಯಾವ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಾಗು ತ್ತಿದೆ.

ಇ) ಶ್ರೇಣಿವಾರು ಎಷ್ಟು ಹುದ್ದೆಗಳು ದಿನಾಂಕ ೨೮-೨-೯೪ರಲ್ಲಿ ಖಾಲಿಯಾಗಿವೆ ಹಾಗೂ ಅವುಗಳಿಗೆ ಆಯ್ಕೆ ಕ್ರಮವನ್ನು ನಿಗಧಿಪಡಿಸಲಾಗಿದೆಯೇ ?

ಈ) ಒಂದು ಪೋಲೀಸ್ ಠಾಣೆಯಲ್ಲಿ ಯಾವ ಯಾವ ಶ್ರೇಣಿಯ ಎಷ್ಟು ಹುದ್ದೆಗಳಿದ್ದು, ಕನಿಷ್ಠ ಮತ್ತು ಗರಿಷ್ಠ ಸಂಖ್ಯೆಯನ್ನು ನಿಗಧಿಪಡಿಸಲಾಗಿದೆಯೇ ? (ಜಿಲ್ಲಾವಾರು ಮಹಿಳಾ ಪೋಲೀಸ್‌ರ ಸಂಖ್ಯೆ ಎಷ್ಟು)

ಉ) ಉದ್ಯೋಗ ವಿನಿಮಯ ಕೇಂದ್ರದಿಂದ ಅಭ್ಯರ್ಥಿಗಳ ಪಟ್ಟಿ ಪಡೆದುಕೊಳ್ಳದೆ ನೇರವಾಗಿ ಅರ್ಜಿಗಳನ್ನು ಆಹ್ವಾನಿಸಿ ಪೋಲೀಸ್ ಪೇದೆ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲು ೧೯೯೨ರಲ್ಲಿ ಸಚಿವ ಸಂಪುಟವು ನಿರ್ಣಯಿಸಿದ್ದಾಗ್ಯೂ ಕಾರ್ಯರೂಪಕ್ಕೆ ಬಾರದಿರುವುದಕ್ಕೆ ಕಾರಣಗಳೇನು ?

ಊ) ಹೊಸದಾಗಿ ಪೋಲೀಸ್ ಠಾಣೆ ಮತ್ತು ಪೋಲೀಸ್ ವೃತ್ತ ವಿಚಾರಣಾಧಿಕಾರಿ (ಸಿ.ಪಿ.ಐ) ಕಛೇರಿ ಕೇಂದ್ರ ಸ್ಥಳಗಳನ್ನು ಗುರುತಿಸಲು ಸರ್ಕಾರ ಯಾವ ಆಡಳಿತಾತ್ಮಕ ಅಂಶಗಳನ್ನು ಪರಿಗಣಿಸಲು ಸೂಚಿಸಿದೆ?

ಋ) ಆ ಠಾಣೆಗಳು ಒಳಪಟ್ಟ ಹಳ್ಳಿಗಳಿಂದ ಬಹುದೂರದ ಸ್ಥಳಗಳಲ್ಲಿದ್ದರೆ ಕೇಂದ್ರ ಸ್ಥಳ ಮಾಪ್ರಾದು ಮಾಡಲಾಗುವುದೇ ?